ಮುಂಜಾವು

ವಾರಪತ್ರಿಕೆ.

ಸಂಪಾದಕ: ಸತಿಮನೆ ನಾಗರಾಜ್

೧೦ನೇ ವರ್ಷ   ೮ನೇ ಸಂಚಿಕೆ   ಬೆಲೆ ೩೦ ಪೈಸೆ

ಕೊಪ್ಪ   ೨೪-೨-೧೯೯೧   ಭಾನುವಾರ   ದೂರವಾಣಿ : ೧೧೪

ಪತಿಯು ಕಳೆದುಕೊಂಡ ದುಃಖತಪ್ತಳಿಗೆ ದುರ್ದೈವದ ಆಘಾತ:

ಬೆಂಕಿ ಅನಾಹುತ: ೪೦ ಸಾವಿರ ನಷ್ಟ

(ವರದಿ: ಜೆ.ಎನ್. ಶ್ರೀನಿಧಿ)

ಹರಿಹರಪುರ : ಈಚೆಗಷ್ಟೇ ನಿಧನರಾಗಿದ್ದ ಇಲ್ಲಿನ ಸೂರಳಿ ಗಣೇಶಯ್ಯ ಎಂಬವರ ಮನೆಯು ಕೊಟ್ಟಿಗೆಗೆ ಫೆ. ೨೦ರ ರಾತ್ರಿ ೧೧ ಗಂಟೆಯ ಸುಮಾರಿಗೆ ಬೆಂಕಿ ಬಿದ್ದು ೪೦ ಸಾವಿರ ರೂಪಾಯಿಗೂ ಹೆಚ್ಚಿನ ನಷ್ಟ ಸಂಭವಿಸಿದೆ.

ಬೆಂಕಿ ಕಂಡು ನೆರವಿಗೆ ಧಾವಿಸಿದ ಸಾಕಷ್ಟು ಜನ ಸಾರ್ವಜನಿಕರು ಬೆಂಕಿಯ ಜ್ವಾಲೆಯಿಂದಲೇ ೨ ದನಗಳನ್ನು ಪಾರು ಮಾಡಿದರಾದರೂ ಒಂದು ಎಮ್ಮೆ ಜೀವಂತ ಸುಟ್ಟು ಹೋಯಿತು.

ಅಲ್ಲದೆ ೩೦ ಹಲಸಿ, ೩೦೦೦ ರೂ. ಬೆಲೆಯ ಒಣ ಹುಲ್ಲು, ೩೦೦೦ ಹೆಂಚು, ಸಾಯು ಅಡಿ ಏಳು. ಗೋಬರ್ ಅನಿಲದ ಸ್ಥಾವರ ಇವೆಲ್ಲ ಬೆಂಕಿಗೆ ಆಹುತಿಯಾಗಿವೆ. ಆ ದಿನವಷ್ಟೇ ಹೊಸದಾಗಿ ಹುಲ್ಲು ತಂದು ಒಟ್ಟಲಿ ಹಾಕಿದ್ದು, ಅಲ್ಲಲ್ಲಿ ಬಿದ್ದಿದ್ದ ಹುಲ್ಲಿನ ಎಸಳುಗಳಿಗೆ ಯಾರೋ ದಾರಿಹೋಕರು ಸೇದಿ ಎಸೆದಿರಬಹುದಾದ ಬೀಡಿ-ಸಿಗರೇಟು-ಬೆಂಕಿಕಡ್ಡಿಯಿಂದ ಬೆಂಕಿ ತಗುಲಿ ಈ ದುರಂತ ಸಂಭವಿಸಿರಬಹುದೆಂದು ಊಹೆ. ಸ್ಪಷ್ಟ ಕಾರಣ ಗೊತ್ತಾಗಿಲ್ಲ.

ಪೋಲೀಸ್ ವೈರ್‌ಲೆಸ್ ಮೂಲಕ ಶಿವಮೊಗ್ಗ-ಚಿಕ್ಕಮಗಳೂರು ಅಗ್ನಿಶಾಮಕ ದಳದವರಿಗೆ ತಿಳಿಸಿ, ಶಿವಮೊಗ್ಗದಿಂದ ಅವರು ಬರುವಷ್ಟರಲ್ಲಿ ಬೆಂಕಿ ನಂದಿಸಲಾಗಿತ್ತು.

ತುಳುವಿನಕೊಪ್ಪ ಗ್ರಾಮಸ್ಥರು ಹೋರಾಡಿ ಮಂಜೂರು ಮಾಡಿಸಿಕೊಂಡಿದ್ದ ಪಿಕ್ ಅಪ್

ಪ್ರಧಾನರ ಜಮೀನು ಬಳಿ ವರ್ಗಾಯಿಸಲು ನಿರ್ಧಾರ!

ಹಲ್ಸೆಗೆ : ತುಳುವಿನಕೊಪ್ಪ ಗ್ರಾಮದ ಟೈಸಾಲ್ ಕಟ್ಟೆ ಹಳ್ಳಕ್ಕೆ ಗ್ರಾಮಸ್ಥರ ತೀವ್ರ ಒತ್ತಾಯದಿಂದ ಮಂಜೂರಾಗಿದ್ದ ಪಿಕ್ ಅಪ್ ಅನ್ನು ನೂತನ ಪ್ರಧಾನರು ತಮ್ಮ ಜಮೀನಿಗೆ ಅನುಕೂಲವಾಗುವಂತೆ ಹೇಟೆಗದ್ದೆ ಗ್ರಾಮದ ಹಟ್ಟೀಕಾಳಿ ಹಳ್ಳಕ್ಕೆ ಬದಲಾಯಿಸಿರುವುದಾಗಿ ತಾ. ಪಂಚಾಯ್ತಿ ಸಮಿತಿ ಸದಸ್ಯ ಟಿ.ಕೆ. ಪ್ರಭಾಕರ್ ಗಂಭೀರ ಆರೋಪ ಮಾಡಿದ್ದಾರೆ.

ಈ ಬಗ್ಗೆ ಗ್ರಾಮಸ್ಥರಿಗೆ ತಿಳಿಸುವುದಿರಲಿ, ಸ್ಥಳೀಯ ಸದಸ್ಯರುಗಳಾದ ಬಿ.ಎಸ್. ಅಣ್ಣಪ್ಪ ಮತ್ತು ರಾಜು ಅವರುಗಳಿಗೇ ತಿಳಿಸಿಲ್ಲವೆಂದೂ, ಮಂಡಲದ ಯಾವ ಸಭೆಯಲ್ಲೂ ಪ್ರಸ್ತಾಪವಾಗಿಲ್ಲವೆಂದೂ ಅವರುಗಳು ಉದ್ರಿಕ್ತ ಗ್ರಾಮಸ್ಥರಿಗೆ ತಿಳಿಸಿರುವುದಾಗಿ ಪ್ರಭಾಕರ್ ಹೇಳಿದ್ದಾರೆ.

ಈ ಬದಲಾವಣೆಗೆ ಜನರ ತಾ. ಪಂಚಾಯ್ತಿ ಸಮಿತಿ ಸಭೆಯಲ್ಲೂ ಒಪ್ಪಿಗೆ ದೊರೆತು, ಈಗ ಜಿಲ್ಲಾ ಪರಿಷತ್ತಿಗೆ ಒಪ್ಪಿಗೆಗೆ ಹೋಗಿದೆ. ಇದನ್ನು ಫೆ. ೧೫ರ ಮಂಡಲ ಸಭೆಯಲ್ಲಿ ಮೇಲ್ಕಂಡ ಸದಸ್ಯರುಗಳು ಪ್ರಶ್ನಿಸಿದಾಗ ಪ್ರಧಾನರು ಹಾರಿಕೆಯ ಉತ್ತರ ನೀಡಿದ್ದಾರೆ. ಈ ಅನ್ಯಾಯ ಸರಿಪಡಿಸುವುದಾಗಿ ಈ ಮೊದಲು ಗ್ರಾಮಸ್ಥರಿಗೆ ಭರವಸೆ ನೀಡಿದ್ದ ಜಿ.ಪ. ಸದಸ್ಯ ಬಿ.ಜಿ. ಚಿದಂಬರ್ ಕೂಡ ಅಂದಿನ ಮಂಡಲ ಸಭೆಯಲ್ಲಿ ಮಾಚಿ ಕೊಪ್ಪ ಪಿಕ್‌ಅಪ್ ಪರವಾಗಿಯೇ ಮಾತನಾಡಿ, ಅಣ್ಣಪ್ಪ ಮತ್ತು ರಾಜು ಅವರುಗಳ ಪ್ರತಿಭಟನೆಗೆ ಕೂಡ ಬೆಲೆ ಬರಲಿಲ್ಲ ಎಂದೂ ಪ್ರಭಾಕರ್ ತಿಳಿಸಿದ್ದಾರೆ.

ತಾ. ಪಂ. ಸ. ಸಭೆಯಲ್ಲಿ ಪ್ರಭಾಕರ್ ಈ ವಿಚಾರಕ್ಕೆ ಪ್ರತಿಭಟಿಸುವುದನ್ನು ತಪ್ಪಿಸಲು, ಜ. ೧೮ರ ತಾ.ಪಂ.ಸ. ಸಭೆಯ ನೋಟೀಸು ಅವರ ಹೆಸರಿಗೆ ಜ. ೧೬ರಂದೇ ಹಲ್ಸೆ ಅಂಚೆಗೆ ಬಂದಿದ್ದರೂ ಅದನ್ನು ಬೇಕೆಂದೇ ೨೫ರವರೆಗೆ ಅಂಚೆಯಲ್ಲಿ ಬಚ್ಚಿಟ್ಟುಕೊಳ್ಳಲಾಗಿತ್ತು. ಅದೇ ರೀತಿ ಫೆ. ೮ರ ತಾ. ಪಂ. ಸ. ಸಭೆಯ ನೋಟೀಸನ್ನು (ಅಂದು ೬೦ ದಿನ ಸಭಾ ನಡವಳಿಕೆ ರಿಕಾರ್ಡ್ ಆಗುವಾಗಲಾದರೂ ಪ್ರಭಾಕರ್ ತೀರಾರು ಒಡ್ಡಬಹುದೆಂದು) ೧೧ರವರೆಗೂ ಅಂಚೆಯಲ್ಲೇ ತಡೆ ಹಿಡಿಸಿದ್ದಾರೆ ಎಂಬ ಗಂಭೀರ ಆಪಾದನೆಯನ್ನೂ ಪ್ರಭಾಕರ್ ಮಾಡಿದ್ದಾರೆ.

ಸಂಬಂಧಪಟ್ಟವರು ಈಗಲಾದರೂ ಈ ಅನ್ಯಾಯ ಸರಿಪಡಿಸಲಿ ಎಂದು ಪ್ರಭಾಕರ್ ಆಗ್ರಹಿಸಿದ್ದಾರೆ.

ಸಹಕಾರ ಸಂಘದ ವೇಳೆ ಬದಲಿಗೆ ಮನವಿ

ಕೊಪ್ಪ: ಇಲ್ಲಿನ ಸರ್ಕಾರಿ ನೌಕರರ ಸಹಕಾರ ಸಂಘದ ವ್ಯವಹಾರದ ವೇಳೆಯನ್ನು ಈಗಿನಂತೆ ಸಂಜೆ ೬.೩೦-೮.೩೦ರ ಬದಲು ಪ್ರತಿದಿನ ಬೆಳಗ್ಗೆ ೯ರಿಂದ ೧೨ ಮತ್ತು ಸಂಜೆ ೪ರಿಂದ ೬ ಗಂಟೆಯವರೆಗೆ ವ್ಯವಸ್ಥೆ ಮಾಡಬೇಕೆಂದು ಗ್ರಾಹಕರು ಮನವಿ ಮಾಡಿದ್ದಾರೆ.

ಕೊಪ್ಪ ಟೌನ್ ಬಿಜೆಪಿ ಘಟಕ ಗ್ರಾಹಕರಿಂದ ಸಹಿ ಸಂಗ್ರಹಿಸಿ ಮನವಿ ಸಲ್ಲಿಸಿದೆ.

ಮಹಿಳಾ ವೈದ್ಯಾಧಿಕಾರಿ ನೇಮಕಕ್ಕೆ ಅಗ್ರಹ

ಇದೇ ರೀತಿ, ಕೊಪ್ಪದ ಸರ್ಕಾರಿ ಆಸ್ಪತ್ರೆಯಲ್ಲಿ ಬಹಳ ಕಾಲದಿಂದ ಖಾಲಿ ಇರುವ ಮಹಿಳಾ ವೈದ್ಯರ ನೇಮಕ ಮಾಡುವಂತೆ ಸರ್ಕಾರಕ್ಕೆ ತಿಳಿಸಬೇಕೆಂದು ವಿಧಾನ ಪರಿಷತ್ ಉಪಸಭಾಪತಿಗಳಾದ ಮಲ್ಲಿಕಾರ್ಜುನಯ್ಯನವರಿಗೆ ಟೌನ್ ಬಿಜೆಪಿ ಅಧ್ಯಕ್ಷ ಬಿ.ಕೆ. ಗಣೇಶರಾವ್ ಮನವಿ ಕಳಿಸಿದ್ದಾರೆ.

ಉಚಿತ ಹೊಲಿಗೆ ತರಗತಿ

ಕೊಪ್ಪ : ಬಾಳಗಡಿಯ ವಿದ್ಯಾಮಾಹಿತಾ ಸಮಾಜದ ಆಶ್ರಯದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಹರಿಜನ/ಗಿರಿಜನ ಮಹಿಳೆಯರಿಗೆ ನುರಿತ ಶಿಕ್ಷಕಿಯರಿಂದ ಉಚಿತ ಹೊಲಿಗೆ ತರಬೇತಿ ತರಗತಿಗಳನ್ನು ಮಾರ್ಚ್ ೧ರಿಂದ ಆರಂಭಿಸಲಾಗುವುದು. ಆಸಕ್ತರು ಫೆ. ೨೮ರೊಳಗೆ ಸಮಾಜದ ಕಾರ್ಯದರ್ಶಿಯವರಾದ ಜಾನಕಿಯಮ್ಮ ಬಳಿ (ಮಂಜುನಾಥ ಕ್ಯಾಂಟೀನ್, ಬಾಳಗಡಿ) ಹೆಸರು ನೋಂದಾಯಿಸಬಹುದು.

ಶೀರ್ಥಹಳ್ಳಿಯಲ್ಲಿ ಕೃಷಿ ಯಂತ್ರಗಳ ಪ್ರದರ್ಶನ

ತೀರ್ಥಹಳ್ಳಿ : ಸುಧಾರಿತ ಅಡಿಕೆ ಸುಲಿಯುವ ಯಂತ್ರ, ಉಗಿ ಚಾಲಿತ ಪಿಸ್ಟನ್ ರಹಿತ ನೀರೆತ್ತುವ ಯಂತ್ರ, ಹಾಳೆದೊನ್ನೆ ಯಂತ್ರ, ನಾಟಿ ಯಂತ್ರ ಮತ್ತು ಒಂಟೆತ್ತಿನ ನೇಗಿಲು ಇವುಗಳ ಪ್ರದರ್ಶನ ಮತ್ತು ಚರ್ಚಾಗೋಷ್ಠಿ ಇಲ್ಲಿ ಫೆ. ೨೭ನೇ ಬುಧವಾರ ಬೆಳಗ್ಗೆ ೧೧ ಗಂಟೆಗೆ ಕುರುವಳ್ಳಿಯ ಕೃಷಿ ನಿವಾಸದಲ್ಲಿ ನಡೆಯಲಿದೆ.

ಕೊಪ್ಪ ಉಪಖಜಾನಾಧಿಕಾರಿ ಅಮಾನತು

ಕೊಪ್ಪ: ೨೦ ಸಾವಿರ ರೂ. ಹಣ ದುರುಪಯೋಗದ ಸಂಬಂಧ ಇಲ್ಲಿನ ಉಪ ಖಜಾನಾಧಿಕಾರಿಯಾಗಿದ್ದ ಹಂಪಣ್ಣ ಅವರನ್ನು ಖಜಾನೆ ಇಲಾಖೆ ಉಪ ನಿರ್ದೇಶಕರ ಆದೇಶದ ಮೇರೆಗೆ ಅಮಾನತಿನಲ್ಲಿಡಲಾಗಿದೆ ಎಂದು ತಿಳಿದು ಬಂದಿದೆ.

ಆಯುರ್ವೇದ ವಿದ್ಯಾರ್ಥಿಗಳ ಹೇಳಿಕೆ: "ನಾವು ಊರಿಗೆ ಪ್ರತಿಸ್ಪರ್ಧಿಗಳಲ್ಲ; ನಾವು ಕೇಳಿದ್ದು ನಮ್ಮ ವರ್ಗಾವಣೆಯನ್ನು — ಕಾಲೇಜಿನದ್ದಲ್ಲ"

ಪ್ರಿಯರೆ,

ನಾವು ಕೊಪ್ಪದ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಮಾನವ ಶರೀರ ಶಾಸ್ತ್ರದ ಪ್ರಾಯೋಗಿಕ ಅಧ್ಯಯನ (anatomy and dissection) ದಿಂದ ಹಿಡಿದು ರೋಗಿಗಳ ತಪಾಸಣೆ ಮತ್ತು ಚಿಕಿತ್ಸೆಯವರೆಗೆ ಅಗತ್ಯವಾದ ಯಾವುದೇ ರೀತಿಯ ಪ್ರಾಯೋಗಿಕ ತರಗತಿ, ತರಬೇತಿಗಳೂ ಇಲ್ಲದೆ ಈಗ ನಾಲ್ಕನೇ ವರ್ಷ ಪೂರೈಸುತ್ತಿದ್ದು, ಈ ಬಗ್ಗೆ ನಮ್ಮಿಂದ ಡೊನೇಶನ್, ಶುಲ್ಕ ಎಲ್ಲ ನುಂಗಿ ಕೂತಿರುವ ಆಡಳಿತ ಮಂಡಳಿಯೊಡನೆ ಇಷ್ಟು ದಿನ ಹೆಣಗಾಡಿದರೂ ಯಶಸ್ವಿಯಾಗದೆ, ಕೊನೆಯಲ್ಲಿ, ಸೂಕ್ತ ಶೈಕ್ಷಣಿಕ ಸೌಕರ್ಯಗಳಿರುವ ರಾಜ್ಯದ ಯಾವುದೇ ಕಾಲೇಜಿಗೆ ನಮ್ಮನ್ನು ಹಂಚಿಕೊಟ್ಟು ವರ್ಗಾಯಿಸುವಂತೆ ವಿಶ್ವವಿದ್ಯಾನಿಲಯವನ್ನು ಒತ್ತಾಯಿಸಿ ಮನವಿ ಮಾಡಿಕೊಂಡಿದ್ದೇವೆ. ವಿಶ್ವವಿದ್ಯಾನಿಲಯದವರೇ ನಮ್ಮನ್ನು ಶಿವಮೊಗ್ಗಕ್ಕೆ ವರ್ಗಾಯಿಸುವುದಾಗಿಯೂ, ಅಲ್ಲಿನ ಸರ್ಕಾರಿ ಮೆಗ್ಗಾನ್ ಆಸ್ಪತ್ರೆಯ ಸೌಕರ್ಯಗಳು ನಮಗೆ ಒಪ್ಪಿಗೆಯೇ? ಎಂದು ಕೇಳಿದ ಬಳಿಕ ಸೂಚಿಸಿದ ಮೇರೆಗೆ ನಮ್ಮ ಪ್ರಿನ್ಸಿಪಾಲ್ ಮತ್ತು ಕೆಲ ಪ್ರಾಧ್ಯಾಪಕರೊಂದಿಗೆ ಅಲ್ಲಿಗೆ ತೆರಳಿ ಪರಿಶೀಲಿಸಿ ನಮ್ಮ ಒಪ್ಪಿಗೆ ಕೊಟ್ಟಿದ್ದೇವೆ.

ಆದರೆ ನಾವುಗಳು ಕೊಪ್ಪದ ಆಯುರ್ವೇದ ಕಾಲೇಜನ್ನೇ ಶಿವಮೊಗ್ಗಕ್ಕೆ ಸ್ಥಳಾಂತರಿಸಲು ಯತ್ನಿಸುತ್ತಿದ್ದೇವೆಂಬ ತಪ್ಪು ಕಲ್ಪನೆಯೊಂದು ಊರಲ್ಲಿ ಸಾರ್ವಜನಿಕರಲ್ಲಿ ಹರಡಿ, ಸಾಕಷ್ಟು ಗೊಂದಲ ಉಂಟು ಮಾಡಿರುವುದು ಕಂಡು ಬರುತ್ತದೆ. ವಿದ್ಯಾರ್ಥಿವೃಂದ ಮತ್ತು ಸಾರ್ವಜನಿಕರು ಪ್ರತಿಸ್ಪರ್ಧಿಗಳೇನೋ ಎಂಬಂಥ ಭಾವನೆಯೊಂದು ಸೃಷ್ಟಿಯಾಗಿದೆ.

"ಆಯುರ್ವೇದ ಕಾಲೇಜಿನ ವಿಚಾರದಲ್ಲಿ ಕೊಳಕು ಬೆಳವಣಿಗೆ?" ಎಂಬ (೧೭-೨-೯೧ರ 'ಮುಂಜಾವು') ವರದಿಯಲ್ಲೂ ಈ ಧ್ವನಿ ಇರುವಂತೆ ಕಾಣುತ್ತಿದೆ.

ಆದರೆ ಆ ವರದಿಯಲ್ಲಿ ಪ್ರಕಟವಾಗಿರುವಂತೆ, ಫೆ. ೧೧ರಂದು ವಿದ್ಯಾರ್ಥಿನಿಯರ ಹಾಸ್ಟೆಲ್ ಮೇಲೆ ನಡೆದ ಕಿಡಿಗೇಡಿಗಳ ಹಲ್ಲೆಯ ಬಗ್ಗೆ ವಿದ್ಯಾರ್ಥಿಗಳು ಸಾರ್ವಜನಿಕರ ವಿರುದ್ಧ ಯಾವುದೇ ಆರೋಪವನ್ನು ಮಾಡಿಲ್ಲ. ಪ್ರಕರಣದ ಬಗ್ಗೆ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹಾಸ್ಟೆಲ್ ವಾರ್ಡನ್ ಮೂಲಕ ಪೋಲೀಸರಿಗೆ ದೂರು ನೀಡಿದ್ದೇವೆ.

ನಾವು ಆಯುರ್ವೇದ ವಿದ್ಯಾರ್ಥಿಗಳು, ಕೊಪ್ಪದಲ್ಲಿ ಕಾಲೇಜು ಪ್ರಾರಂಭವಾದ ದಿನದಿಂದಲೇ (೧೯೮೭) ಕೊಪ್ಪದ ಜನರೊಡನೆ ಸ್ನೇಹದಿಂದಲೇ ಬಂದಿದ್ದೇವೆ. ತುರ್ತಾಗಿ [illegible] ಅವಶ್ಯಕತೆ ಇದ್ದಾಗ, ಪ್ರತಿ ಬಾರಿಯೂ [illegible] ದಾನ ಮಾಡಿದ್ದೇವೆ. ಪೋಲಿಯೋ, [illegible] ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದೇವೆ.

(ನಾವು ಯಾವುದೇ ಗಲಭೆ ಗಲಾಟೆಗಳಲ್ಲಿ ಭಾಗವಹಿಸಿರುವಾಗ ಅಥವಾ [illegible] ಹೋಗ ಬಯಸಿದಾಗ [illegible] "[illegible]", "[illegible]" [illegible] ಮಾಡುತ್ತಿದ್ದೇವೆ. ನಮ್ಮ [illegible] ಕಳೆದುಕೊಳ್ಳಲು [illegible] ಸಿದ್ಧರಿಲ್ಲ. [illegible] ನಮ್ಮ ಶಾಂತಿ ನಮ್ಮ ಪ್ರತಿಸ್ಪರ್ಧಿಗಳೆಂದು ನಿಮಗೆ ಅನಿಸುವುದೇ?) (ಮುಂದುವರೆಯುವುದು)

ಆಯುರ್ವೇದ ವಿದ್ಯಾರ್ಥಿಗಳು ಊರಿಗೆ ಪ್ರತಿಸ್ಪರ್ಧಿಗಳಲ್ಲ

(ಹಿಂದಿನ ಪುಟದಿಂದ)

ಇನ್ನು ಈ ಕಾಲೇಜಿನಲ್ಲಿ ನಾವು ಕಲಿತ ಕ್ರಮವನ್ನಷ್ಟು ಹೇಳುತ್ತೇವೆ. ಕೊಡ್ಗಿಹಿತ್ಲಿನ ಆಸ್ಪತ್ರೆಯಲ್ಲಿ ಪ್ರಯೋಗಕ್ಕಾಗಿ ಹೆಣ ಕುಯ್ಯುವುದಕ್ಕೆ ನಮಗೆ ಜನ್ಮನರ ಸಹಾಯವಿಲ್ಲದೆ ನಾವೇ ಹೆಣ ಎತ್ತಿ ತಂದು ಸ್ವಚ್ಛಗೊಳಿಸಿ, ಕೊಯ್ದು, ಪುನಃ ಅದನ್ನು ಹೂಳಿ, ಸ್ವಚ್ಛಗೊಳಿಸಿ....ಇಷ್ಟೆಲ್ಲಾ ಮಾಡಬೇಕಾಗುತ್ತಿತ್ತು. ರಾಜ್ಯದ ಬೆಳಗಾವಿ, ಮೈಸೂರು, ಉಡುಪಿ ಮುಂತಾದ ಕಾಲೇಜುಗಳಿಗೆ ನಮ್ಮ ಖರ್ಚಿನಲ್ಲೇ ಹೋಗಿ, ಕೆಲವು ಪ್ರಯೋಗಗಳನ್ನು ಕೇವಲ ಕಣ್ಣಿನಿಂದ ನೋಡಿ ಬಂದಿದ್ದೂ ಇದೆ.

ಆಗೆಲ್ಲ ಸಾರ್ವಜನಿಕರು ಮಾಡಬಹುದಾದ್ದು ಏನೂ ಇರಲಿಲ್ಲವಾದ್ದರಿಂಧ, ನಾವು ಎಲ್ಲ ಕೊರತೆಗಳನ್ನೂ ಸಹಿಸಿಕೊಂಡು ಆಡಳಿತ ಮಂಡಳಿಯೊಂದಿಗೇ ಹೆಣಗಾಡಿದ್ದೇವೆ.

ನಾಲ್ಕನೇ ವರ್ಷದ ತಂಡಕ್ಕೆ ಇನ್ನುಳಿದ ಒಂದೂವರೆ ವರ್ಷದಲ್ಲಾದರೂ (ಹಾಗೆಯೇ ಇನ್ನುಳಿದ ತಂಡಗಳವರಿಗೆ ಉಳಿದ ಅವಧಿಯಲ್ಲಾದರೂ) ಸೂಕ್ತ ಸೌಲಭ್ಯ ದೊರೆಯದಿದ್ದರೆ ನಾವು ನಮ್ಮ ಬದುಕಿಗೇ ಹೊರೆಯಾಗುವುದು ಮಾತ್ರವಲ್ಲ, ಸಮಾಜಕ್ಕೂ ಅಪಾಯಕಾರಿಯಾಗುತ್ತೇವೆ. ಏಕೆಂದರೆ ಏನೂ ಕಲಿಯದಿದ್ದರೂ ವಿ.ವಿ.ಯು ಆಡಳಿತ ಮಂಡಳಿಯ ಒತ್ತಾಸೆಯಿಂದಲೋ, ಏನೂ ಸೌಕರ್ಯವಿರಲಿಲ್ಲವೆಂದು ನಮ್ಮ ಮೇಲೆ ಕರುಣೆಯಿಂದಲೋ ನಮ್ಮನ್ನು 'ಡಾಕ್ಟರು'ಗಳೆಂದು ಪಾಸು ಮಾಡಿ ಬಿಡಬಹುದು!

ಫೆಬ್ರವರಿ ೫ರ ಸಭೆಯಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿ ಕುಶಲಶೆಟ್ಟಿಯವರು ಇರುವುದು ತೀರಾ ಅಗತ್ಯವಿತ್ತು. ಆದರೆ ಅವರು ಕುತಂತ್ರದಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದರು. ಆದ್ದರಿಂದ ನಾವು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅವರು ಹೊರ ಹೋಗದಂತೆ ಗೇಟಿಗೆ ಅಡ್ಡ ನಿಂತು ತಡೆದೆವು. ಆ ಸಮಯದಲ್ಲಿ ಅಲ್ಲಿಗೆ ಬಂದ ಸಾರ್ವಜನಿಕರ ಗುಂಪಿನೊಂದಿಗೆ ಕುಶಲಶೆಟ್ಟರೂ ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದದ್ದರಿಂದ ನಾವು ಸಾರ್ವಜನಿಕರಲ್ಲಿ ಕೆಲವರನ್ನು ಮಾತ್ರ ಒಳಗೆ ಬಿಟ್ಟೆವು ನಂತರ ಕುಶಲಶೆಟ್ಟರು ವಿಶ್ವವಿದ್ಯಾನಿಲಯದ ಸಭೆಯಲ್ಲಿ ಕುಳಿತ ನಂತರ ನಾವು ಸಾರ್ವಜನಿಕರನ್ನು ಒಳಗೆ ಆಹ್ವಾನಿಸಿದರೂ ಅವರು ಆಕ್ರೋಶದಿಂದ ತಿರಸ್ಕರಿಸಿದರು. ಆದರೆ ನಾವು ವಿದ್ಯಾರ್ಥಿಗಳು ಉದ್ದೇಶಪೂರ್ವಕವಾಗಿ ಅವರಿಗೆ ಅವಮಾನ ಮಾಡಲು ಯಾರನ್ನೂ ತಡೆದುದಲ್ಲ. ಹಾಗೂ ನಮ್ಮ ಅಸಹಾಯಕತೆಯನ್ನು ಸಾರ್ವಜನಿಕರು ಅರ್ಥ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಹಾಗೊಂದು ವೇಳೆ ನಾವು ಆ ಸಮಯದಲ್ಲಿ ಸಾರ್ವಜನಿಕರಿಗೆ ಮನನೋಯಿಸಿದ್ದಲ್ಲಿ ಬೇಷರತ್ ಕ್ಷಮಾಪಣೆ ಕೇಳಿಕೊಳ್ಳುತ್ತೇವೆ ಒಂದು ವೇಳೆ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ಕೊಪ್ಪದಲ್ಲೇ ನೀಡಿ, ಅದನ್ನು ವಿಶ್ವವಿದ್ಯಾನಿಲಯವೂ ಒಪ್ಪಿಕೊಂಡು, ನಾವುಗಳು ಕೊಪ್ಪದಲ್ಲೇ ಉಳಿಯಬೇಕಾಗಿ ಬಂದರೂ ಸಹ, ನಮ್ಮಲ್ಲಿ ಯಾವುದೇ ದ್ವೇಷ ಭಾವನೆಯನ್ನಿಟ್ಟುಕೊಳ್ಳದೆ, ನಮಗೆ ಸಹಾಯ, ಸಹಾನುಭೂತಿ ನೀಡಬೇಕಾಗಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ ವಿದ್ಯಾರ್ಥಿಗಳು,

ಆಯುರ್ವೇದಿಕ್ ಕಾಲೇಜು, ಕೊಪ್ಪ.

ಹೊಸ ಫೋನ್ ಸಂಪರ್ಕಕ್ಕೆ ಅರ್ಜಿ ಫಾರಂ ಲಭ್ಯ

ಕೊಪ್ಪ ದೂರವಾಣಿ ಕೇಂದ್ರದಿಂದ ಸಂಪರ್ಕ ಪಡೆದಿರುವ ಎಲ್ಲಾ ದೂರವಾಣಿ ಕೇಂದ್ರಗಳಲ್ಲಿ ಹೊಸ ದೂರವಾಣಿ ಸಂಪರ್ಕಗಳಿಗಾಗಿ ಅರ್ಜಿ ಫಾರಂಗಳು ಕೊಪ್ಪ ದೂರವಾಣಿ ಕೇಂದ್ರದಲ್ಲಿ ಜೂನಿಯರ್ ಇಂಜಿನಿಯರ್‌ರವರಲ್ಲಿ ದೊರೆಯುತ್ತವೆ. ೧೦/- ರೂ.ಗಳ ಪೋಸ್ಟಲ್ ಆರ್ಡರ್ ತಂದು ಪಡೆಯಬಹುದೆಂದು ತಿಳಿಸಲಾಗಿದೆ.

ಜನಗಣತಿಗೆ ಸಹಕರಿಸಲು ರಾಷ್ಟ್ರಪತಿ, ಪ್ರಧಾನಿ ಮನವಿ

ಭಾರತದ ೧೩ನೆಯ ದಶ ವಾರ್ಷಿಕ ಜನಗಣತಿಯು ದೇಶದ ಆರ್ಥಿಕ ಮತ್ತು ಸಾಮಾಜಿಕ ಜೀವನದ ಸಮಗ್ರ ಅಭಿವೃದ್ಧಿಗೆ ಅತ್ಯಗತ್ಯ ಮಾಹಿತಿಗಳನ್ನೊದಗಿಸಲಿದ್ದು, ಸಾರ್ವಜನಿಕರೆಲ್ಲರೂ ಈ ಕಾರ್ಯಕ್ಕೆ ಪೂರ್ಣ ಸಹಕಾರ ನೀಡಬೇಕೆಂದು ರಾಷ್ಟ್ರಪತಿ, ಪ್ರಧಾನಿ ರಾಷ್ಟ್ರಕ್ಕೆ ಮನವಿ ಮಾಡಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ ೧೯-೨-೯೧

ಸರಕು : ೫೫೦೦-೬೦೨೦

ಬೆಟ್ಟೆ : ೪೯೧೩-೫೩೫೧

ಗೊರಬಲು : ೩೨೦೦

ಸಾಗರ ೧೯-೨-೯೧

ಆಪಿ : ೫೫೧೯-೬೭೯೯

ರಾಶಿ ಇಡಿ : ೪೬೬೦-೪೯೦೧

ಚಾಲಿ : ೪೨೦೯-೪೫೬೯

ಸಿಪ್ಪೆ ಗೋಟು : ೧೬೮೯-೨೧೬೨

ಹೆಸರು ಬದಲಾವಣೆ

ಕೊಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಯಾದ ಕರಿಯಪ್ಪ ಬಿನ್ ತೇಜಪ್ಪ ಶೆಟ್ಟಿಯಾದ ನಾನು ನನ್ನ ಹೆಸರನ್ನು ಸ್ವಂತ ಇಚ್ಛೆಯಿಂದ ಟಿ. ರವಿ ಎಂದು ಬದಲಾಯಿಸಿ ನ.ರಾ.ಪುರ ನ್ಯಾಯಾಲಯದಲ್ಲಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ.

ಆದ್ದರಿಂದ ಇನ್ನು ಮುಂದೆ ನನ್ನ ಎಲ್ಲಾ ವ್ಯವಹಾರವನ್ನು ಟಿ ರವಿ ಎಂದೇ ಮುಂದುವರಿಸುತ್ತೇನೆ. (ಸಹಿ) ಟಿ ರವಿ

ಬಸರೀಕಟ್ಟೆ ಪ್ರೌಢಶಾಲೆ ಬೆಳ್ಳಿಹಬ್ಬ

ಬಸರೀಕಟ್ಟೆ: ಜಿಲ್ಲೆಯ ಉತ್ತಮ ಪ್ರೌಢಶಾಲೆಗಳಲ್ಲೊಂದೆನ್ನಿಸಿರುವ ಇಲ್ಲಿನ ಶ್ರೀ ಸದ್ಗುರು ಪ್ರೌಢ ಶಾಲೆಯ ಬೆಳ್ಳಿ ಹಬ್ಬದ ಸಮಾರಂಭಗಳು ಫೆ ೧೫ರಿಂದ ೧೭ರವರೆಗೆ ವಿಜೃಂಭಣೆಯಿಂದ ಅವಿಸ್ಮರಣೀಯವಾಗಿ ನಡೆದವು

(ವಿವರ ಮುಂದಿನ ಸಂಚಿಕೆಯಲ್ಲಿ — ಸಂ.)

ರಥೋತ್ಸವ

ಸಿದ್ಧರಮಠ : ಇಲ್ಲಿನ ಸಿದ್ಧೇಶ್ವರ ಸ್ವಾಮಿ ಜಾತ್ರೆ ಫೆ ೨೬ರಿಂದ ಮಾರ್ಚ್ ೩ರವರೆಗೆ ನಡೆಯಲಿದ್ದು, ೨೮ರಂದು ಮಹಾ ರಥೋತ್ಸವ ಇದೆ. ಫೆ ೨೮ ಮತ್ತು ಮಾ. ೧ರಂದು ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳಿವೆ.

ಸಂಖ್ಯೆ/ಸಿಆರ್‌ಸಿ/ಸಿಆರ್/31/89-90

ತಹಸೀಲ್ದಾರ್‌ರವರ ಕಾರ್ಯಾಲಯ,
ಕೊಪ್ಪ ತಾಲ್ಲೂಕು, ಕೊಪ್ಪ.
ದಿನಾಂಕ : 20-2-91

ಪ್ರ ಕ ಟ ಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಕಸಬಾ ಹೋಬಳಿ ಕೊಪ್ಪ ಟೌನ್ ಕೆಳಗಿನಪೇಟೆಯಲ್ಲಿ ವಾಸವಾಗಿರುವ ಶ್ರೀ ಎಲಿಯಾಸ್ ಡಯಾಸ್ ಎಂಬುವವರು ಹೇರಂಭಾಪುರ ಮತ್ತು ತನೂಡಿ ಗ್ರಾಮದ ಸ್ನೋನ್ಲಿ ಎಸ್ಟೇಟ್ ಎಂಬ ಹೆಸರಿನ ಕಾಫಿ ತೋಟವನ್ನು ಶ್ರೀ ಸಿ. ಕರ್ಡಾ ಎಂಬುವವರಿಂದ ಕ್ರಯಕ್ಕೆ ಪಡೆದಿದ್ದು, ಸದ್ರಿ ಸಿಆರ್‌ಸಿ 13/81-82 ಅನ್ನು ರದ್ದುಪಡಿಸಿ, ತಮ್ಮ ಹೆಸರಿಗೆ ಬದಲಾಯಿಸಿ ಕೊಡಬೇಕೆಂದು ಹಾಗೂ ಸಿಆರ್‌ಸಿ 13/81-82 ರ ಸಿಆರ್‌ಸಿ ಕಳೆದು ಹೋಗಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ ಮೇಲ್ಕಂಡ ಕಾಫಿ ಸಿಆರ್‌ಸಿ 13/81-82 ಅನ್ನು ರದ್ದುಪಡಿಸಿ, ಶ್ರೀ ಎಲಿಯಾಸ್ ಡಯಾಸ್‌ರವರಿಗೆ ಹೊಸದಾಗಿ ನೀಡುವ ಬಗ್ಗೆ ಯಾರಿಂದಲಾದರೂ ತಕರಾರು ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ಹದಿನೈದು ದಿನಗಳ ಒಳಗಾಗಿ ಲಿಖಿತ ಮೂಲಕ ಅಥವಾ ಖುದ್ದಾಗಿಯಾಗಲೀ ಈ ಕಾರ್ಯಾಲಯಕ್ಕೆ ತಿಳಿಸಲು ಕೋರಲಾಗಿದೆ. ವಾಯಿದೆ ಗತಿಸಿದ ನಂತರ ಬರಬಹುದಾದ ಅಹವಾಲುಗಳನ್ನು ಗಮನಕ್ಕೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.

(ಸಹಿ) **ತಹಸೀಲ್ದಾರ್, ಕೊಪ್ಪ ತಾಲ್ಲೂಕು**

ಕೊಪ್ಪ (ಮಧ್ಯಂತರ) ಮಂಡಲ ಪಂಚಾಯಿತಿ ಕಾರ್ಯಾಲಯ

1991-92ನೇ ಸಾಲಿನ ಲೀಸ್ ಆಕ್ಷನ್ ನೋಟಿಫಿಕೇಶನ್ ನಂಬರ್

ಎಸ್. ಸಿ. (1) ಪಿ ಆರ್. 437/1 ದಿನಾಂಕ 1-2-1991

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ ಟೌನ್ - ಕೊಪ್ಪ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಸೇರಿರುವ ಈ ಕೆಳಕಂಡ ಬಾಬುಗಳನ್ನು 1-4-1991ರಿಂದ 31-3-92ರವರೆಗಿನ ಒಂದು ವರ್ಷದ ಕಾಲಾವಧಿಗೆ ದಿನಾಂಕ 3-3-91ನೇ ಭಾನುವಾರ ಬೆಳಿಗ್ಗೆ 11-00 ಗಂಟೆಗೆ ಕೊಪ್ಪ ಮಂಡಲ ಪಂಚಾಯಿತಿಯ ಕಾರ್ಯಾಲಯದಲ್ಲಿ ಪ್ರಧಾನರಿಂದ ಅಥವಾ ಅವರಿಂದ ಅಧಿಕಾರ ಪಡೆದವರಿಂದ ಬಹಿರಂಗ ಹರಾಜು ಮೂಲಕ ವಿಲೇವಾರಿಯನ್ನು ಮಂಡಲ ಪಂಚಾಯಿತ್ತಿಯ ಷರತ್ತಿಗೆ ಒಳಪಟ್ಟು ಮಾಡಲಾಗುತ್ತದೆ. ಇಷ್ಟವುಳ್ಳವರು ಲೀಸ್ ಆಕ್ಷನ್‌ನಲ್ಲಿ ಭಾಗವಹಿಸಿ ಪಡೆಯಬಹುದು.

ಹರಾಜು ಮಾಡುವ ಬಾಬುಗಳು :

೧) ಸ್ಲಾಟರ್ ಹೌಸಿನಲ್ಲಿ ಆಡು ಮತ್ತು ಕುರಿಗಳನ್ನು ಕಡಿಯುವ ಹಕ್ಕು	ಒಂದು ವರ್ಷದ ಅವಧಿ
೨) ಮಾರ್ಕೆಟ್ ರಸ್ತೆಯಲ್ಲಿರುವ ಎರಡು ಮಾಂಸದ ಅಂಗಡಿಗಳಲ್ಲಿ ಆಡು ಮತ್ತು ಕುರಿಗಳ ಮಾಂಸವನ್ನು ಮಾರಾಟ ಮಾಡುವ ಹಕ್ಕು	"
೩) 10 ಮೀನು ಮಾರುವ ಹೊಸ ಕಟ್ಟಡದ ಸ್ಟಾಲುಗಳು (ಒಂದು ವರ್ಷದ ಅವಧಿಗೆ)	
೪) 10 ಮೀನು ಮಾರುವ ಕಟ್ಟಡದ ಮುಂಭಾಗದ ಆವರಣದಲ್ಲಿರುವ ಒಣ ಮೀನು ಮಾರಾಟದ ಮಳಿಗೆಗಳು	"
೫) ಮಧ್ಯಾಂತರ ಮಂಡಲ ಪಂಚಾಯ್ತಿಗೆ ಸೇರಿರುವ ಸಂತೆಯಲ್ಲಿ ಸಂತೆ ಸುಂಕ ವಸೂಲಿ ಮಾಡುವ ಹಕ್ಕು	"
೬) ಮಾರ್ಕೆಟ್ ರಸ್ತೆ ಎಡ ಭಾಗದಲ್ಲಿರುವ 1ರಿಂದ 26 ಅಕ್ಕಿ ಮಳಿಗೆಗಳು	"
೭) ಹನ್ನೊಂದು ತೆಂಗಿನ ಮರಗಳಲ್ಲಿ ಫಸಲನ್ನು ಕೀಳುವ ಹಕ್ಕು	"
೮) 6 ಹಣ್ಣಿನಂಗಡಿ ಮಳಿಗೆಗಳು.	"

ಹರಾಜಿಗೆ ಸಂಬಂಧಿಸಿದ ಷರತ್ತುಗಳು ಮತ್ತಿತರ ವಿವರಗಳನ್ನು ಮಂಡಲ ಪಂಚಾಯ್ತಿ ಕಾರ್ಯಾಲಯದಲ್ಲಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದು.

(ಸಹಿ) **ಆರ್. ಗಣೇಶ್,** ಕಾರ್ಯದರ್ಶಿಗಳು,

(ಸಹಿ) **ಪಿ.ಬಿ. ವಿವೇಕ್,** ಪ್ರಧಾನರು,

ಮಂಡಲ ಪಂಚಾಯ್ತಿ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶ್ರೀನಿವಾಸ ನಾಗರಾಜ್, ಅಜ್ಜು : ವಿಳಾಸಕ್ಕೆ ಅಜ್ಜುಕೋಟೆ, ಕೊಪ್ಪ